# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 380 |
| ಸದಸ್ಯರ ಹೆಸರು | ಶ್ರೀ ಮಂಜುನಾಥ್ ಭಂಡಾರಿ |
| ಉತ್ತರಿಸುವ ದಿನಾಂಕ | 11-12-2024 |
| ಉತ್ತರಿಸುವವರು | ಸಾರಿಗೆ ಮತ್ತು ಮುಜರಾಯಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ಕರಾವಳಿ ಜಿಲ್ಲೆಗಳಲ್ಲಿ ಧಾರ್ಮಿಕ ಸ್ಥಳಗಳಿಗೆ ಪ್ರವಾಸ ನೀಡುವ ಭಕ್ತಾದಿಗಳ ಸಂಖ್ಯೆ ಹೆಚ್ಚಾಗಿರುವ ಹಿನ್ನಲೆಯಲ್ಲಿ ಅವರಿಗೆ ಸುಲಲಿತ ಸೇವೆ ಲಭ್ಯವಾಗುವಂತೆ ಹಾಗೂ ಇತರ ಮೂಲ ಸೌಕರ್ಯಗಳ ಅಭಿವೃದ್ಧಿಗೆ ಅಗತ್ಯವಿರುವ ಸುಧಾರಣೆಗಳನ್ನು ಮುಜರಾಯಿ ದೇವಸ್ಥಾನಗಳಲ್ಲಿ ಕೈಗೊಂಡಿರುವ ಕ್ರಮಗಳೇನು; | ಕರಾವಳಿ ಜಿಲ್ಲೆಗಳಲ್ಲಿ ಪ್ರವರ್ಗ 'ಎ' ದೇವಾಲಯಗಳಲ್ಲಿ ಭಕ್ತಾದಿಗಳಿಗೆ ಶೌಚಾಲಯ, ನೀರಿನ ವ್ಯವಸ್ಥೆ ಮತ್ತು ವಿಶ್ರಾಂತಿ ಗೃಹಗಳನ್ನು ಹಾಗೂ ಇನ್ನಿತರೆ ವ್ಯವಸ್ಥೆಗಳನ್ನು ನಿರ್ಮಿಸಲಾಗಿರುತ್ತದೆ. ಆದಾಯದ ಲಭ್ಯತೆಗೆ ಅನುಗುಣವಾಗಿ ಸದರಿ ಸೌಲಭ್ಯಗಳನ್ನು ಆಯಾಯಾ ದೇವಾಲಯಗಳ ಆಡಳಿತ ಮಂಡಳಿ ಈ ಸೌಲಭ್ಯಗಳನ್ನು ಕಲ್ಪಿಸಲು ಕ್ರಮಕೈಗೊಳ್ಳುತ್ತಿದೆ ಹಾಗೂ ವಿಶೇಷ ಚೇತನರಿಗೆ ಮತ್ತು 60 ವರ್ಷ ಮೇಲ್ಪಟ್ಟವರಿಗೆ ನೇರ ದರ್ಶನಕ್ಕೆ ಪ್ರತ್ಯೇಕ ವ್ಯವಸ್ಥೆ ಕಲ್ಪಿಸಲಾಗಿದೆ, ಮಕ್ಕಳಿಗೆ ಹಾಲುಣಿಸುವ ಕೇಂದ್ರ ತೆರೆಯಲಾಗಿರುತ್ತದೆ. |
| ಆ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಕೆಲವು ಅತಿ ಹೆಚ್ಚು ಪ್ರವಾಸಿಗಳನ್ನು ಸೆಳೆಯುತ್ತಿರುವ ದೇವಸ್ಥಾನ ಆಡಳಿತ ಮಂಡಳಿಗಳಲ್ಲಿ ಇರುವ ಹಣವನ್ನು ಅಲ್ಲಿಯ ಮೂಲ ಸೌಕರ್ಯಗಳ ಅಭಿವೃದ್ಧಿ ಉದ್ದೇಶಗಳಿಗೆ ಬಳಸಲಾಗುತ್ತಿದೆಯೇ; ಈ ದೇವಸ್ಥಾನಗಳಲ್ಲಿ ಅಗತ್ಯಕ್ಕೆ ಅನುಗುಣವಾಗಿ ಅಭಿವೃದ್ಧಿ ಕಾರ್ಯಗಳಿಗೆ ಹಣ ಖರ್ಚು ಮಾಡಲು ದೇವಸ್ಥಾನಗಳ ಕಾರ್ಯನಿರ್ವಹಣಾಧಿಕಾರಿ, ಆಡಳಿತದ ಮಂಡಳಿ, ಆಡಳಿತ ಅಧಿಕಾರಿ, ಜಿಲ್ಲಾಧಿಕಾರಿ ಹಾಗೂ ಧಾರ್ಮಿಕ ಮತ್ತು ದತ್ತಿ ಇಲಾಖೆಯ ಆಯುಕ್ತರುಗಳಿಗೆ ಇರುವ ವೆಚ್ಚದ ಮಿತಿಗಳೇನು; ಈ ವೆಚ್ಚ ಮಿತಿಯಂತೆ ನಿಯಮಿತವಾಗಿ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆಯೇ? | ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಯ ಕೆಲವು ಅತೀ ಹೆಚ್ಚು ಪ್ರವಾಸಿಗಳನ್ನು ಸೆಳೆಯುತ್ತಿರುವ ದೇವಾಲಯದ ಆಡಳಿತ ಮಂಡಳಿಗಳಲ್ಲಿ ಇರುವ ಹಣವನ್ನು ಅಲ್ಲಿಯ ಮೂಲ ಸೌಕರ್ಯಗಳ ಅಭಿವೃದ್ಧಿಗಳಿಗೆ ಬಳಸಲಾಗುತ್ತಿದೆ.<br><br>ಸರ್ಕಾರದ ಆದೇಶ ಸಂಖ್ಯೆ: ಕಂಇ 28 ಮುಆಬಿ 2015 ದಿನಾಂಕ:20.02.2015 ರ ಅಧಿಸೂಚನೆ ಪ್ರಕಾರ ರೂ.100.00 ಲಕ್ಷ ಮೇಲ್ಪಟ್ಟ ಕಾಮಗಾರಿ / ಅಭಿವೃದ್ಧಿ ಕಾರ್ಯಗಳಿಗೆ ಅನುಮತಿ ನೀಡುವ ಅಧಿಕಾರವನ್ನು ಧಾರ್ಮಿಕ ದತ್ತಿ ಆಯುಕ್ತರಿಗೆ ಮತ್ತು ರೂ.100.00 ಲಕ್ಷದ ವರೆಗಿನ ಅಧಿಕಾರವನ್ನು ಜಿಲ್ಲಾಧಿಕಾರಿಯವರಿಗೆ ಹಾಗೂ ರೂ.25.00 ಲಕ್ಷದ ವರೆಗಿನ ಅಂದಾಜುಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿ/ ದೇವಾಲಯದ ನಿಧಿಯಿಂದ ಭರಿಸಲು ರೂ.25.00 ಲಕ್ಷದ ವರೆಗೆ ಮಂಜೂರಾತಿ ನೀಡುವ ಅಧಿಕಾರವನ್ನು ಉಪವಿಭಾಗಾಧಿಕಾರಿ/ಸಹಾಯಕ ಆಯುಕ್ತರು/ ತತ್ಸಮಾನ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಪ್ರತ್ಯಾಯೋಜಿಸಲಾಗಿರುತ್ತದೆ ಹಾಗೂ ರೂ.10.00 ಲಕ್ಷದವರೆಗಿನ ಅಂದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಅಧಿಕಾರ ನೀಡಲಾಗಿರುತ್ತದೆ. ಈ ವೆಚ್ಚದ ಮಿತಿಯಿಂದ ಅಗತ್ಯ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. |
| ಇ) | ಕುಕ್ಕೆ ಸುಬ್ರಮಣ್ಯ ದೇವಸ್ಥಾನಕ್ಕೆ ವಾರ್ಷಿಕವಾಗಿ ಭೇಟಿ ನೀಡುವ ಭಕ್ತಾದಿಗಳ ಸಂಖ್ಯೆಗೆ ಅನುಗುಣವಾಗಿ ಪ್ರಸ್ತುತ ಲಭ್ಯವಿರುವ ದೇವಸ್ಥಾನದ ಮತ್ತು ಇತರ ಖಾಸಗಿ ವಸತಿ ಗೃಹ ಹಾಗೂ ತಂಗುವ ತಾಣಗಳ ಸಾಮರ್ಥ್ಯ ಎಷ್ಟು? ಕಡೆಯ ಬಾರಿ ಯಾವಾಗ ದೇವಸ್ಥಾನದ ವಸತಿ ಸಾಮರ್ಥ್ಯವನ್ನು ಹೆಚ್ಚಿಸಲಾಗಿತ್ತು? | ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಾಲಯದಲ್ಲಿ ಪ್ರಸ್ತುತ ಒಟ್ಟು 8 ವಸತಿ ಗೃಹಗಳಿದ್ದು, ಇದರಲ್ಲಿ 560 ಕೊಠಡಿಗಳಿರುತ್ತವೆ. ಸುಮಾರು 2800 ಮಂದಿ ಭಕ್ತಾದಿಗಳು ಈ ವಸತಿ ಗೃಹಗಳಲ್ಲಿ ತಂಗಲು ವ್ಯವಸ್ಥೆ ಇರುತ್ತದೆ.<br><br>ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಸುಮಾರು 50 ಕ್ಕೂ ಮೇಲ್ಪಟ್ಟು ಖಾಸಗಿ ವಸತಿ ಗೃಹಗಳು ಇರುತ್ತವೆ.<br><br>2017ನೇ ಸಾಲಿನಲ್ಲಿ 180 ಕೊಠಡಿಗಳಿರುವ ಅನಘ |

| ಪ್ರಶ್ನೆ | ಉತ್ತರ |
|---|---|
| ಇನ್ನು ಮುಂದೆ ವಸತಿ ಸಾಮರ್ಥ್ಯವನ್ನು ಹೆಚ್ಚಿಸಲು ಕ್ರಮವಹಿಸಲಾಗುವುದೆ; | ವಸತಿ ಗೃಹವನ್ನು ನಿರ್ಮಾಣ ಮಾಡಲಾಗಿದ್ದು, ಭಕ್ತಾದಿಗಳಿಗೆ ಕೊಠಡಿಯನ್ನು ಒದಗಿಸಲಾಗುತ್ತಿದೆ.<br><br>200 ಕೊಠಡಿಗಳ ವಸತಿ ಗೃಹ ಕಟ್ಟಡದ ನಿರ್ಮಾಣದ ಬಗ್ಗೆ ಅಂದಾಜುಪಟ್ಟಿ ಮತ್ತು ನಕ್ಷೆ ತಯಾರಿಸುವ ಕುರಿತು ಲೋಕೋಪಯೋಗಿ ಇಲಾಖೆ, ಮಂಗಳೂರು ಇವರನ್ನು ಈಗಾಗಲೇ ಕೋರಲಾಗಿದೆ. |
| ಈಗಾಗಲೇ ದೇವಸ್ಥಾನದ ಆಡಳಿತ ಮಂಡಳಿಯಲ್ಲಿ ಇರುವ ಸಂಪನ್ಮೂಲವನ್ನು ಬಳಸಿ ಸುತ್ತು ಪೌಳಿ, ಆಶ್ಲೇಷ ಮಂದಿರ, ಪ್ರವಾಸಿ ಮಂದಿರ, ದಾಸೋಹ ಭವನ ಇವುಗಳ ನಿರ್ಮಾಣ ಮತ್ತು ಸ್ನಾನ ಘಟ್ಟ ಮತ್ತು ವಾಹನ ನಿಲುಗಡೆ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ಯಾವ ಕಾಲಮಿತಿಯೊಳಗೆ ಕ್ರಿಯಾಯೋಜನೆ ರೂಪಿಸಿ ಅನುಷ್ಠಾನಿಸಲಾಗುವುದು? | ಶ್ರೀ ದೇವಳದ ವತಿಯಿಂದ ಈ ಕೆಳಗೆ ತಿಳಿಸಿದ ಕಾಮಗಾರಿಗಳನ್ನು ಕೈಗೆತ್ತಿಗೊಳ್ಳುವ ವಿಚಾರವಾಗಿ ಅಂದಾಜುಪಟ್ಟಿ ಮತ್ತು ನಕ್ಷೆ ತಯಾರಿಸಿ ಸಲ್ಲಿಸಲು, ಲೋಕೋಪಯೋಗಿ ಇಲಾಖೆ, ಮಂಗಳೂರು ಇವರನ್ನು ಕೋರಲಾಗಿದೆ. |

| | |
|---|---|
| 1. | ಸುತ್ತುಗೋಪುರ ನಿರ್ಮಾಣ ಕಾಮಗಾರಿ |
| 2. | ಡೈನಿಂಗ್ ಹಾಲ್ ನಿರ್ಮಾಣ ಕಾಮಗಾರಿ |
| 3. | ಸರ್ಪಸಂಸ್ಕಾರ ಯಾಗಶಾಲೆ ಕಟ್ಟಡ |
| 4. | 200 ಕೊಠಡಿಗಳ ಅತಿಥಿಗೃಹ ಕಟ್ಟಡ |
| 5. | ಸುಸಜ್ಜಿತ ಮಲ್ಟಿಲೆವೆಲ್ ವಾಹನ ಪಾರ್ಕಿಂಗ್ ವ್ಯವಸ್ಥೆ. |

ಇದಲ್ಲದೇ ಶ್ರೀ ದೇವಳದ 5 ನೇ ಹಂತದ ಮಾಸ್ಟರ್ ಪ್ಲಾನ್ ನಲ್ಲಿ ಈ ಕೆಳಗಿನ ಕಾಮಗಾರಿಗಳನ್ನು ನಿರ್ವಹಿಸಲು ಉದ್ದೇಶಿಸಲಾಗಿದೆ.

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ವಿವರ | ಅಂದಾಜು ಮೊತ್ತ |
|---|---|---|
| 1 | ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ರಥಬೀದಿಯ ಎರಡು ಬದಿಯಲ್ಲಿ ಪಾರಂಪರಿಕ ಕಟ್ಟಡ ನಿರ್ಮಾಣ | 4,525.00 |
| 2 | ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ರಥಬೀದಿಯ ಬದಿಯಲ್ಲಿ ವಾಣಿಜ್ಯ ಸಂಕೀರ್ಣ ಕಟ್ಟಡ ನಿರ್ಮಾಣ. | 5,250.00 |
| 3 | ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಆಶ್ಲೇಷ ಬಲಿ ಪೂಜಾ ಮಂದಿರ ನಿರ್ಮಾಣ ಕಾಮಗಾರಿ. | 1,350.00 |
| 4 | ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ವಾಣಿಜ್ಯ ಸಂಕೀರ್ಣ ಕಟ್ಟಡ ನಿರ್ಮಾಣ ಕಾಮಗಾರಿ. | 4,200.00 |
| 5 | ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಪವರ್ ಸ್ಟೇಶನ್ ನಿರ್ಮಾಣ ಕಾಮಗಾರಿ | 850.00 |
| | **ಒಟ್ಟು** | **20,350.00** |

ಸಂಖ್ಯೆ: ಕಂಇ 147 ಮುಸಪು 2024

**(ರಾಮಲಿಂಗಾರೆಡ್ಡಿ)**
**ಸಾರಿಗೆ ಮತ್ತು ಮುಜರಾಯಿ ಸಚಿವರು**